# ಸಂಪಾದಕೀಯ

## ನಮ್ಮ ಮುಂದಿರುವ ಕರ್ತವ್ಯ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಈಗಾಗಲೇ ಅರುವತ್ತು ವರ್ಷಗಳಾಗುತ್ತಿದೆ. ದೇಶದ ನಾಯಕರನ್ನು ನಾವೇ ಚುನಾವಣೆಯ ಮೂಲಕ ಆರಿಸಿ, ಸಂಸತ್ತು ಹಾಗೂ ವಿಧಾನ ಮಂಡಲಗಳಲ್ಲಿನ ಕಲಾಪಗಳ ಮೂಲಕ ಕಾನೂನುಗಳನ್ನು ಸೃಷ್ಟಿಸುತ್ತೇವೆ. ಹಿಂದಿನ ಸಮಸ್ಯೆಗಳನ್ನು ಮರೆತು ಮುನ್ನಡೆಯುವ ತೀರ್ಮಾನವನ್ನು ವರ್ಷವರ್ಷವೂ ಕೈಗೊಳ್ಳುತ್ತೇವೆ. ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದರೆ ಮುಗಿದು ಹೋಯಿತೆ? ದೇಶವನ್ನು, ಅದರ ಜನಸಾಮಾನ್ಯರನ್ನು ಕಾಡುತ್ತಿರುವ ಸಮಸ್ಯೆಗಳನ್ನು ಬಗೆಹರಿಸಿ ಸ್ವಾತಂತ್ರ್ಯದ ಸವಿ ಬದುಕನ್ನು ಎಲ್ಲರಿಗೂ ಒದಗಿಸುವುದು ಬೇಡವೇ? ಹಿಂದಿನ ಸಮಸ್ಯೆಗಳಿಂದ ಪಾಠಗಳನ್ನು ಕಲಿತು, ಕಲೆತು ಮುಂದೆ ಸಾಗುವ ಪ್ರಯತ್ನ ನಮ್ಮದಾಗಬೇಕು. ಪ್ರಜಾಪ್ರಭುತ್ವವೆಂದರೆ ಎಲ್ಲ ಪ್ರಜೆಗಳನ್ನೂ ಒಳಗೊಂಡಿರುವ ರಾಜಕೀಯ ವ್ಯವಸ್ಥೆ. ವಸ್ತುಸ್ಥಿತಿಯ ಅರಿವಿಲ್ಲದ ಎಲ್ಲೋ ಕೆಲವರು ಇತರರ ಜೀವನದ ಆಗುಹೋಗುಗಳನ್ನು ತೀರ್ಮಾನ ಮಾಡುವುದು ಎಂದಿಗೂ ಸಾಧುವಲ್ಲ. ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸದೆ ಕೇವಲ ಹಕ್ಕುಗಳ, ಸೌಲಭ್ಯಗಳ ಬೆಂಬತ್ತಿ ಓಡುವ ಸಮಾಜದ ಯಾವುದೇ ವರ್ಗದವರೂ ದೇಶಪ್ರೇಮಿಗಳೆನಿಸಲಾರರು. ಸ್ವತಂತ್ರರೆಂದು ಹೇಳಿಕೊಳ್ಳಲು ನಾವು ಏನನ್ನು ಸಾಧಿಸಿದ್ದೇವೆ, ಮತ್ತೆಷ್ಟು ಬಾಕಿಯಿದೆ ಎಂಬುದನ್ನು ತಿಳಿಯುವುದು ಅತ್ಯಗತ್ಯ.

> **ದೇವರು ಧನ, ಅಧಿಕಾರವನ್ನು ಕೊಡುವುದು ಹತ್ತು ಜನಕ್ಕೆ ಉಪಕಾರ ಮಾಡಲಿ ಎಂದು. ಆದರೆ ಮನುಷ್ಯ ಅದನ್ನು ನೂರಾರು ಜನರನ್ನು ಸುಲಿಗೆ ಮಾಡಲು ಉಪಯೋಗಿಸುತ್ತಾನೆ.**
>
> —ತ.ರಾ.ಸು.

ಆಧುನಿಕ ತಂತ್ರಜ್ಞಾನದ ಬಳಕೆಯಿಂದಾಗಿ ಹಾಗೂ ಮುಕ್ತ ಆರ್ಥಿಕ ವ್ಯವಸ್ಥೆಯ ಫಲವಾಗಿ ಇಂದಿನ ಭಾರತೀಯ ಸಮಾಜ ಅನೇಕ ಬದಲಾವಣೆಗಳನ್ನು ಹೊಂದಿದೆ. ಸುಮಾರು ಒಂದೂವರೆ ದಶಕಕ್ಕೂ ಹಿಂದೆ ಪ್ರಾರಂಭವಾದ ಈ ವ್ಯಾಪಕವಾದ ಬದಲಾವಣೆಗಳು ಗ್ರಾಮೀಣ ಪ್ರದೇಶಗಳಿಗೂ ತಲುಪಿವೆ. ಕೃಷಿಉತ್ಪನ್ನಗಳ ತಯಾರಿಕೆಯಲ್ಲೂ ಕೂಡ ಜಟಿಲವಾದ ಯಂತ್ರ-ತಂತ್ರಗಳ ಬಳಕೆ ಅನಿವಾರ್ಯವೆಂದೇ ಭಾವಿಸಿ 'ಹಸಿರು ಕ್ರಾಂತಿ' ಹಾಗೂ 'ಶ್ವೇತ ಕ್ರಾಂತಿ'ಗಳ ಮೂಲಕ ವಿದೇಶಿ ತಂತ್ರಜ್ಞಾನವನ್ನು ಎಲ್ಲೆಡೆ ಬಳಸಿದೆವು. ಕೃತಕ ಗೊಬ್ಬರಗಳ ಬಳಕೆಯಿಂದ ಭೂಮಿಯ ಫಲವತ್ತತೆಯು ಕಳೆದುಹೋಗಿ ಬರಡು ಭೂಮಿಯ ಸಮಸ್ಯೆ ಅನೇಕ ರೈತರನ್ನು ಕಾಡುತ್ತಿದೆ. ನೈಸರ್ಗಿಕ ಸಾವಯವ ಕೃಷಿ ವಿಧಾನಗಳತ್ತ ಇತ್ತೀಚೆಗೆ ಮತ್ತೆ ಗಮನ ಹರಿಸುವ ಪ್ರಯತ್ನ ನಡೆದಿದೆಯಾದರೂ ಸುಲಭದ ಜೀವನಕ್ಕೆ ಒಗ್ಗಿಹೋಗಿರುವ ನಮ್ಮ ದೇಶಬಾಂಧವರು ಸಾಕಷ್ಟು ಕ್ರಿಯಾಶೀಲರಾಗಿ ಈ ವಿಧಾನಗಳನ್ನು ಬಳಸುತ್ತಿಲ್ಲ. ಔಷಧಗಳ ವಿಪರೀತ ಸಿಂಪಡಿಕೆಯಿಂದ ಬೆಳೆಯುವ ಕೃಷಿ ಉತ್ಪನ್ನಗಳ ಬಳಕೆಯಿಂದ ದೇಹದ ನಿರೋಧಕಶಕ್ತಿಯು ಕಡಮೆಯಾಗುತ್ತಿದೆ ಎಂದು ಆರೋಗ್ಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ರಾಸಾಯನಿಕ ಪದಾರ್ಥಗಳ ದುರ್ಬಳಕೆ ಅನೇಕ ಪಕ್ಷಿ ಪ್ರಾಣಿ ಸಂಕುಲಗಳನ್ನು ನಾಶ ಮಾಡಿದೆ. ತಳಿಸಂಶೋಧನೆ ಕ್ಷೇತ್ರದಲ್ಲೂ ವಿದೇಶದಿಂದ ಆಮದು ಮಾಡಿಕೊಂಡ, ಆನುವಂಶಿಕ ಗುಣಗಳನ್ನು ಬದಲಾಯಿಸಿರುವ ಸಸಿಗಳ ಬಳಕೆ ಪ್ರಾರಂಭವಾಗಿದೆ. ಇದರಿಂದ ಹೆಚ್ಚು ಇಳುವರಿ ಹಾಗೂ ರೋಗಮುಕ್ತವಾದ ತಳಿಗಳನ್ನು ವೃದ್ಧಿಸಬಹುದು ಎಂದು ಕೆಲವರ ಅಭಿಪ್ರಾಯವಾದರೆ, ಇದರಿಂದ ಸ್ಥಳೀಯ ತಳಿಗಳ ನಾಶವಾಗುವ ಸಾಧ್ಯತೆ ಹಾಗೂ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳನ್ನು ಕುರಿತು ಹಲವೆಡೆ ಚರ್ಚೆ ನಡೆಯುತ್ತಿದೆ.

ಗೃಹೋಪಯೋಗಿ ಪದಾರ್ಥಗಳ ತಯಾರಿಕೆ ಹಾಗೂ ಕೈಗಾರಿಕೋದ್ಯಮಗಳಲ್ಲೂ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವೆವು. ದೊಡ್ಡ ಬಂಡವಾಳ ಹೂಡಬಲ್ಲವರು ಎಲ್ಲ ಮಾರುಕಟ್ಟೆಗಳನ್ನು ಹಾಗೂ ವಿತರಣೆ ಮಾಡುವ ಮಾರ್ಗಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿರುವುದರಿಂದ ತಯಾರಾದ ಪದಾರ್ಥಗಳ ಲಾಭವೆಲ್ಲ ಇವರಿಗೇ ಹೋಗುತ್ತದೆ. ದಲ್ಲಾಳಿಗಳ ಕೈವಾಡದಿಂದಾಗಿ ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿಲ್ಲ.

ಚೀನಾ, ತೈವಾನ್, ಜಪಾನ್ ದೇಶಗಳು ಅತ್ಯಂತ ಕಡಮೆ ಬೆಲೆಯ ಆಕರ್ಷಕ ವಸ್ತುಗಳನ್ನು ರಫ್ತು ಮಾಡುತ್ತಿರುವುದರಿಂದ ವಾಣಿಜ್ಯ ಕ್ಷೇತ್ರದಲ್ಲಿ ಸ್ಪರ್ಧೆಯು ತೀವ್ರವಾಗಿದ್ದು, ಪದಾರ್ಥದ ಗುಣಮಟ್ಟಕ್ಕಿಂತ ಜಾಹಿರಾತು ಹಾಗೂ ಪ್ರಚಾರವೇ ಮುಖ್ಯವೆಂಬ ಪರಿಸ್ಥಿತಿ ಬಂದೊದಗಿದೆ. ವಿದೇಶಿ ಮಾರುಕಟ್ಟೆಗಳ ಬೇಡಿಕೆಗಳನ್ನು ಪೂರೈಸಲು ಹುಟ್ಟಿಕೊಂಡಿರುವ ನಾನಾ ರೀತಿಯ ವಾಣಿಜ್ಯೋದ್ಯಮಗಳಲ್ಲಿ ದುಡಿಯುವ ನೌಕರರ ಸಮಸ್ಯೆಗಳೂ ಹಲವಾರು. ಕಾರ್ಮಿಕ ಕಲ್ಯಾಣದ ಹೆಸರಿನಲ್ಲಿ ಪ್ರಾರಂಭಗೊಂಡ ಕಾರ್ಮಿಕರ ಸಂಘಗಳು ರಾಜಕೀಯ ಹಾಗೂ ಪಟ್ಟಭದ್ರ ಶಕ್ತಿಗಳ ಕೈಗೊಂಬೆಗಳಾಗಿವೆ. ಹೀಗೆ ಸಮಾಜದ ಎಲ್ಲ ಸ್ತರಗಳಲ್ಲೂ, ದೇಶದ ಎಲ್ಲ ಭಾಗಗಳಲ್ಲೂ ಸಮಸ್ಯೆಗಳನ್ನು ಕಾಣುತ್ತಿದ್ದೇವೆ.

ನಮ್ಮ ದೇಶದ ಸಮಸ್ಯೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಬಾಹ್ಯ ಹಾಗೂ ಆಂತರಿಕ ಸಮಸ್ಯೆಗಳು. ಅಕ್ಕಪಕ್ಕದ ಬಡದೇಶಗಳ ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಒತ್ತಡಗಳಿಂದಾಗಿ ವಲಸೆ ಬರುವ ಜನರು, ವಿದೇಶಿ ಮಾರುಕಟ್ಟೆಗಳ ಸ್ಪರ್ಧೆ, ಇತರ ದೇಶಗಳ ಪ್ರಚೋದನೆಯಿಂದ ನಡೆಯುವ ಭಯೋತ್ಪಾದನೆ, ಅಂತಾರಾಷ್ಟ್ರೀಯ ವಲಯದಲ್ಲಿ ನಡೆಯುವ ಆರ್ಥಿಕ ಮುಗ್ಗಟ್ಟುಗಳು ಹಾಗೂ ರಾಜಕೀಯ ಕಾರ್ಯನೀತಿಗಳು—ಇವೆಲ್ಲವೂ ಬಾಹ್ಯ ಸಮಸ್ಯೆಗಳು. ಇವುಗಳನ್ನು ಯಶಸ್ವಿಯಾಗಿ ಎದುರಿಸದೇ ಹೋದರೆ ನಮ್ಮ ಸಂಪನ್ಮೂಲಗಳೂ ನಾಶವಾಗುವುದಲ್ಲದೆ ಸಾಮಾಜಿಕ ಅಸ್ಥಿರತೆಯೂ ಉಂಟಾಗುತ್ತದೆ. ಪ್ರತಿಯೊಂದು ರಾಷ್ಟ್ರವೂ ತನ್ನ ಹಿತವನ್ನು ಕಾಪಾಡಿಕೊಳ್ಳುತ್ತ ಇತರ ರಾಷ್ಟ್ರಗಳೊಂದಿಗೆ ಸೌಹಾರ್ದವನ್ನು ಸಾಧಿಸಲು ವಿದೇಶಾಂಗ ನೀತಿಗಳನ್ನು ಹೊಂದಿರುತ್ತದೆ. ಭಾರತವು ಯಾವಾಗಲೂ ನಿಷ್ಪಕ್ಷಪಾತದ ನಿಲುವನ್ನು ಹೊಂದಿದ್ದು ಶಾಂತಿಯ ಸಂದೇಶವನ್ನು ಸಾರುತ್ತ ಬಂದಿದೆ. ಇತ್ತೀಚಿನ ದಶಕಗಳಲ್ಲಿ ಭಾರತವು ಒಂದು ಪ್ರಬಲ ರಾಷ್ಟ್ರವಾಗಿ ರೂಪುಗೊಂಡಿದೆ. ಇಲ್ಲಿನ ಬೃಹತ್ ಮಾನವ ಸಂಪನ್ಮೂಲ ಹಾಗೂ ಆರ್ಥಿಕ ಸ್ಥಿರತೆಯಿಂದಾಗಿ ಇತರ ರಾಷ್ಟ್ರಗಳು ಭಾರತದಲ್ಲಿ ಬಂಡವಾಳ ಹೂಡಲು ಮುಂದಾಗುತ್ತಿವೆ. ಮಾಹಿತಿ ತಂತ್ರಜ್ಞಾನದ ವಲಯದಲ್ಲಂತೂ ಭಾರತವು ವಿಶೇಷ ಸ್ಥಾನವನ್ನೇ ಪಡೆದುಕೊಂಡಿದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಎಲ್ಲ ದೇಶಗಳಲ್ಲೂ 'ರಾಷ್ಟ್ರೀಯ ಭಾವನೆಗಳು' ಹಾಗೂ 'ಸಮಾಜವಾದ' ಪ್ರಬಲವಾದ ವಿದ್ಯಮಾನಗಳಾಗಿ ಕಂಡುಬಂದವು. ಎಲ್ಲ ರಾಷ್ಟ್ರಗಳಿಗೂ, ಜನಾಂಗಗಳಿಗೂ ತಾವು ಸ್ವತಂತ್ರವಾಗಿರಬೇಕೆಂಬ ಭಾವನೆಯು ಬಲವಾಗಿ ಬೇರೂರಿತು. ತಮ್ಮ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಸ್ವತಂತ್ರವಾಗಿ ಬೆಳೆಯುವ ಹಕ್ಕು ಎಲ್ಲರಿಗೂ ಇದೆ ಎಂಬ ಭಾವನೆಯು, ಅನೇಕ ಕಡೆ ಹರಡಿದ್ದ ವಸಾಹತುಗಳ ಬಿಡುಗಡೆಗೆ ಕಾರಣವಾಯಿತು. ರಾಷ್ಟ್ರೀಯ ಭಾವನೆಯು ತೀವ್ರಗೊಂಡು ರಾಜಕೀಯ ಹಾಗೂ ಸೇನಾ ಶಕ್ತಿಗಳಿಂದ ಇತರ ದೇಶಗಳನ್ನು ಆಕ್ರಮಿಸುವ ಪ್ರವೃತ್ತಿಯೂ ಕಂಡುಬಂದಿತು. ಎರಡು ಮಹಾಯುದ್ಧಗಳೇ ನಡೆದುಹೋಗಿ ಶಾಂತಿಯನ್ನು ಕಾಪಾಡುವ ಸಲುವಾಗಿ ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಯಿತು. ಆದರೂ ಹಳೆಯ ಹಗರಣಗಳನ್ನೇ ಉಳಿಸಿಕೊಂಡು, ವೈಮನಸ್ಯವನ್ನೇ ಪೋಷಿಸುತ್ತ, ಒಳಸಂಚುಗಳಿಂದ ಇತರ ರಾಷ್ಟ್ರಗಳೊಡನೆ ಸಂಘರ್ಷಕ್ಕೆ ತೊಡಗುವ ರಾಷ್ಟ್ರಗಳು ಈಗಲೂ ಇವೆ. ಅಂತಾರಾಷ್ಟ್ರೀಯ ರಾಜಕೀಯವು ಅತ್ಯಂತ ಜಟಿಲ. ಹೇಗಾದರೂ ಮಾಡಿ ತಮ್ಮ ದೇಶದ, ಧರ್ಮದ, ಜನಾಂಗದ ಮೇಲ್ಮೆಯನ್ನು ಸಾಧಿಸಲು ಪೈಪೋಟಿ ನಡೆಯುತ್ತಲೇ ಇರುತ್ತದೆ.

ಭಾರತದ ಆಂತರಿಕ ಸಮಸ್ಯೆಗಳು ಹತ್ತು ಹಲವು. ಕಿತ್ತು ತಿನ್ನುವ ಬಡತನ ಒಂದೆಡೆಯಾದರೆ, ನಿರ್ದಿಷ್ಟವಾದ ಯೋಜನೆಗಳನ್ನು ಯಶಸ್ವಿಯಾಗಿ ವಿಫಲಗೊಳಿಸುವ ಭ್ರಷ್ಟ ಆಡಳಿತವರ್ಗ ಇನ್ನೊಂದೆಡೆ ಸೇರಿಕೊಂಡಿದೆ. ಎಲ್ಲ ಆಧುನಿಕ ತಂತ್ರಜ್ಞಾನವೂ ನಗರ ಪ್ರದೇಶಗಳಿಗೆ ಹಾಗೂ ಹೆಚ್ಚು ಹೆಚ್ಚು ಬಂಡವಾಳವನ್ನು ಹೂಡಬಲ್ಲ ಧನಿಕರಿಗೇ ಸೀಮಿತಗೊಳ್ಳುತ್ತಿದ್ದು ಉಳ್ಳವರು ಹಾಗೂ ಇಲ್ಲದವರ ನಡುವಣ ಅಂತರವು ಹೆಚ್ಚುತ್ತಲೇ ಇದೆ. ಈ ಭಾವನೆಯನ್ನು ಜಾನ್ ರಸ್ಕಿನ್‌ನ ವ್ಯಂಗ್ಯ ಮಾತುಗಳಲ್ಲಿ ಕಾಣಬಹುದು: "ಶ್ರೀಮಂತರಾಗುವ ಕಲೆ ಎಂದರೆ ನಾವು ಹೆಚ್ಚು ಹೆಚ್ಚು ಸಂಪಾದಿಸುವುದಷ್ಟೇ ಅಲ್ಲ, ಇತರರು ಕಡಿಮೆ ಕಡಿಮೆ ಉಳ್ಳವರಾಗಿರುವಂತೆಯೂ ಯತ್ನಿಸುವುದು."

ಇಡೀ ದೇಶದ ಆಹಾರಧಾನ್ಯಗಳ, ಕೃಷಿ ಉತ್ಪನ್ನಗಳ ಅರ್ಧಭಾಗವನ್ನು ನಮ್ಮ ದೇಶದ ೪೫೩ ಜಿಲ್ಲೆಗಳ ಪೈಕಿ ಕೇವಲ ೪೪ ಜಿಲ್ಲೆಗಳು ಪೂರೈಸುತ್ತಿವೆ. ರೈತಾಪಿ ಜನರಲ್ಲೂ ಧನಿಕರು ಹಾಗೂ ಬಡವರ ನಡುವಿನ ತೆರಪು ಅಧಿಕವಾಗುತ್ತಲೇ ಇದೆ. ಸಾಲದ ಹೊರೆಯಿಂದ ಕಂಗೆಟ್ಟು, ಬೆಳೆಯನ್ನು ಮಾರಲಾಗದೆ, ದಳ್ಳಾಳಿಗಳ ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಕೈವಶವಾಗುವ ಬಡ ರೈತರ ದುರ್ಭರ ಜೀವನವನ್ನು ದಿನಪತ್ರಿಕೆಗಳಲ್ಲಿ ಪ್ರತಿನಿತ್ಯ ಕಾಣುತ್ತಿದ್ದೇವೆ. ಸಾವಿರಾರು ಎಕರೆ ಜಮೀನಿನ ಮಾಲೀಕರ ಕೈಕೆಳಗೆ ದುಡಿಯುವ ಜೀತದಾಳುಗಳು, ಬಾಲಕಾರ್ಮಿಕರು, ಮಹಿಳೆಯರು—ಇವರೆಲ್ಲರ ಭವಿಷ್ಯ, ಸ್ವಾತಂತ್ರ್ಯಗಳ ಕುರಿತು ಕೇವಲ ವೇದಿಕೆಗಳ ಮೇಲಿಂದ ಆಶ್ವಾಸನೆಗಳು ಕೇಳಿಬರುತ್ತವೆ. ಅಂತಿಮವಾಗಿ ಇವೆಲ್ಲವೂ ಓಟು ಗಳಿಸುವ ಮಾರ್ಗಗಳಾಗಿ ಪರಿಣಮಿಸಿವೆ. ಚುನಾವಣೆ ಬಂತೆಂದರೆ ಕೊಳೆಗೇರಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿಲ್ಲದ ಚಟುವಟಿಕೆ, ವಾಗ್ದಾನಗಳ ಭರಾಟೆ!

ಭಾರತದ ಜನಸಂಖ್ಯೆಯ ಶೇ.೭೦ ಭಾಗ ಇಂದಿಗೂ ಕೃಷಿಯನ್ನೇ ಅವಲಂಬಿಸಿದೆ. ಆರು ಲಕ್ಷ ಹಳ್ಳಿಗಳಲ್ಲಿ ವಾಸಿಸುತ್ತಿರುವ ನೂರೈದು ದಶಲಕ್ಷ ರೈತಕುಟುಂಬಗಳಿಗೆ ಬೇಸಾಯವೇ ಜೀವನೋಪಾಯ. ಭೂಮಿಯಿಲ್ಲದ ಬಡ ರೈತರ ಕುಟುಂಬಗಳ ಸಂಖ್ಯೆ ತೊಂಬತ್ತು ದಶಲಕ್ಷ! ಒಬ್ಬ ವ್ಯಕ್ತಿಗೆ ಸಿಗಬಹುದಾದ ಭೂಮಿ ಕೇವಲ ೦.೧೫ ಹೆಕ್ಟೇರ್; ಅದರ ಪ್ರಮಾಣ ದಿನೇ ದಿನೇ ಇನ್ನೂ ಕ್ಷೀಣಿಸುತ್ತಾ ಇದೆ. ಶೇ.೩೦ರಷ್ಟು ರೈತರು ಮಾತ್ರ ಆಧುನಿಕ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ. ಸಂಶೋಧನಾ ಕೇಂದ್ರಗಳಿಗೂ, ವಾಸ್ತವ ಪ್ರಪಂಚಕ್ಕೂ ನಡುವೆ

**ಕೆಲವರು ಇತರರಿಗಿಂತ ಬಲಾಢ್ಯರಾಗಿರುವರು. ಅವರು ದುರ್ಬಲರನ್ನು ಸೋಲಿಸುವರೆಂಬುದು ಎಲ್ಲರಿಗೂ ಗೊತ್ತು. ಆದರೆ, ಅವರು ಇತರರನ್ನು ಸೋಲಿಸಬಲ್ಲರೆಂದು, ಎಲ್ಲ ಸುಖವನ್ನೂ ತಾವೇ ಅನುಭವಿಸಬೇಕೆಂಬುದು ಧರ್ಮಕ್ಕೆ ವಿರೋಧವಾಗಿದೆ. ಕೆಲವರಿಗೆ ಇತರರಿಗಿಂತ ಹೆಚ್ಚು ಧನಾರ್ಜನೆ ಮಾಡುವ ಶಕ್ತಿ ಇದೆ ಎಂಬುದು ನಿಜ. ಆದರೆ ಅವರಿಗೆ ಐಶ್ವರ್ಯವನ್ನು ಸಂಪಾದಿಸುವ ಶಕ್ತಿ ಇದೆ ಎಂದು, ಯಾರಿಗೆ ಆ ಶಕ್ತಿ ಇಲ್ಲವೋ ಅವರನ್ನು ತುಳಿಯಲು ಯತ್ನಿಸುವುದು ಧರ್ಮಕ್ಕೆ ವಿರೋಧ. ಯಾವಾಗಲೂ ಇದಕ್ಕೆ ವಿರೋಧವಾಗಿದೆ ಹೋರಾಟ. ಇತರರಿಗೆ ಇಲ್ಲದ ಒಂದು ಸೌಲಭ್ಯ ನಮಗಿರುವುದು ಒಂದು ಸವಲತ್ತು (privilege). ಅನಾದಿ ಕಾಲದಿಂದಲೂ ಧರ್ಮ ಇದನ್ನು ಧ್ವಂಸ ಮಾಡಲು ಯತ್ನಿಸುತ್ತಿದೆ. ವೈವಿಧ್ಯತೆಯನ್ನು ನಾಶಮಾಡದೆ ಸಮಾನತೆಯನ್ನು ತರುವುದೇ ಇದರ ಉದ್ದೇಶ.**

**—ಸ್ವಾಮಿ ವಿವೇಕಾನಂದ**

ಬಹಳ ಅಂತರವಿದೆ. ವಿಶಾಲವಾದ ಈ ದೇಶದ ವಿವಿಧ ತಾಪಮಾನಗಳ, ಭೂಮಿಯ ಗುಣಗಳ ಸಮಗ್ರ ಅಧ್ಯಯನ ಇನ್ನೂ ನಡೆಯಬೇಕಾಗಿದೆ. ಮುಂಗಾರು ಮಳೆಯನ್ನೇ ಅವಲಂಬಿಸಿ ಕೃಷಿಯಲ್ಲಿ ತೊಡಗುವ ನಮ್ಮ ದೇಶದ ಬಹುತೇಕ ರೈತರಿಗೆ ಜಲಸಂರಕ್ಷಣೆಯ ವಿಧಾನಗಳನ್ನು ತಿಳಿಸಿಕೊಡುವ ಕಾರ್ಯವನ್ನು ವ್ಯಾಪಕವಾಗಿ ಕೈಗೊಳ್ಳಬೇಕಾಗಿದೆ.

ನಮ್ಮ ದೇಶದಲ್ಲಿನ ವಿವಿಧತೆಯನ್ನು ಗುರುತಿಸುವುದು ಹಾಗೂ ಸಂರಕ್ಷಿಸುವುದು ನಮ್ಮ ಅತಿ ಮುಖ್ಯ ಕರ್ತವ್ಯ ವಾಗಬೇಕು. ವೈವಿಧ್ಯತೆ ಹಾಗೂ ಅಸಮತೆಗಳನ್ನು ಪಿಡುಗೆಂದು ನಾವು ಭಾವಿಸುತ್ತೇವೆ. ಆದರೆ ಎಲ್ಲರೂ ಒಂದೇ ರೀತಿ ಇರುವುದು, ಬಾಳುವುದು ಎಂದಿಗೂ ಸಾಧ್ಯವಿಲ್ಲ. ಒಂದು ತೋಟದಲ್ಲಿ ನಾನಾ ಬಗೆಯ, ಬಣ್ಣಗಳ ಪುಷ್ಪಗಳು ಇಲ್ಲದಿದ್ದರೆ, ಏಕತಾನತೆ ಎದ್ದು ಕಂಡು ಬೇಸರ ತರಿಸುತ್ತದೆ. ವಿವಿಧ ಗಿಡಗಳ, ಮರಗಳ ನೈಸರ್ಗಿಕ ವ್ಯತ್ಯಾಸಗಳು ಅವುಗಳಿಗೆ ಪ್ರತ್ಯೇಕತೆ ಯನ್ನೂ, ವೈಶಿಷ್ಟ್ಯವನ್ನೂ ನೀಡುತ್ತವೆ. ಸಮಸ್ಯೆ ಉದ್ಭವ ವಾಗುವುದು ನಾವು ಅವುಗಳಿಗೆ ಸ್ಥಾನ ಹಾಗೂ ಬೆಲೆಯನ್ನು ನಿಗದಿ ಮಾಡಿದಾಗ; ಇದು ದುಬಾರಿ, ಇದು ಸಾಮಾನ್ಯವಾದ ಗಿಡ, ಇದು ಗುಲಾಬಿ, ಇದು ಕಳಪೆ ಗಿಡ ಎಂದು ಹೆಸರಿನ ಪಟ್ಟಿ ಕಟ್ಟಿ ತಾರತಮ್ಯವನ್ನು ಸೃಷ್ಟಿಸಿದಾಗ. ಮನುಷ್ಯರಲ್ಲೂ ಸಹ ಅವರು ಬೆಳೆದುಬಂದ ವಾತಾವರಣ ಹಾಗೂ ಸಂಪ್ರದಾಯಗಳಂತೆ ಅಸಮತೆ ಇರುತ್ತದೆ. ಆದರೆ ಅದು ಅಸಂಬದ್ಧವಲ್ಲ. ಹೀಗೇಕೆ, ಹಾಗೇಕೆ ಎಂದು ಪ್ರಶ್ನಿಸಿ ಒಂದು ಪಂಗಡವನ್ನು ಉತ್ತಮ, ಮತ್ತೊಂದನ್ನು ಕೀಳು ಎಂದು ಗುರುತಿಸುವುದು ಸಲ್ಲ. ಹಾಗೆ ಮಾಡಿದಾಗ ಸಾಮಾಜಿಕ ರಚನೆಯಲ್ಲಿ ನೀತಿಭ್ರಷ್ಟತೆಗೆ ಅವಕಾಶ ಕಲ್ಪಿಸಿದಂತಾಗಿ, ಜನರು ಸಮಾನವಾಗಿ ಜೀವಿಸುವ ಹಕ್ಕನ್ನೇ ಕಳೆದುಕೊಳ್ಳುತ್ತಾರೆ.

ಭೇದಗಳನ್ನು ಗುರುತಿಸುವುದರ ಫಲವಾಗಿ ವಂಚಿತರಲ್ಲಿ ವೈಷಮ್ಯ ಹಾಗೂ ಅಸಮಾಧಾನಗಳು ಮತ್ತಷ್ಟು ಬೆಳೆಯು ತ್ತಲೇ ಹೋಗುತ್ತವೆ. 'ನಾವು ವಂಚಿತರು' ಎಂಬ ಕೊರತೆಯ ಭಾವನೆಯುಳ್ಳವರು ದ್ವೇಷದಿಂದ ಪ್ರಭಾವಿತರಾಗಿ, ದುರ್ನೀತಿ ಹಾಗೂ ಅನೈತಿಕ ವಿಧಾನಗಳ ಮೂಲಕ ತಮ್ಮ ಇಷ್ಟವನ್ನು ಸಾಧಿಸಿಕೊಳ್ಳುವುದು ಅನಿವಾರ್ಯ ಎಂದು ಭಾವಿಸುತ್ತಾರೆ. ಹಾಗೆ ಆದಾಗ ನೈತಿಕತೆ ಕುಸಿಯುತ್ತದೆ. ಮೂಲಭೂತವಾಗಿ ನಾವು ಗಮನಿಸಬೇಕಾದ ಅಂಶವೆಂದರೆ ಅಸಮತೆ ವಂಚನೆಗೆ ದಾರಿಯಾಗಬಾರದು. ಯಾವುದೇ ರೀತಿಯ ಶೋಷಣೆ ಸಮಾಜದ ಆರೋಗ್ಯಕ್ಕೆ ಮಾರಕ. ಒಂದು ಕುಟುಂಬದಲ್ಲಿ ಮೂರು ಮಕ್ಕಳಿದ್ದರೆ ಅವರ ತಂದೆ ತಾಯಿ ತಮ್ಮ ಮಕ್ಕಳ ಭಿನ್ನ ಭಿನ್ನ ರುಚಿಗಳಿಗೆ ತಕ್ಕಂತೆ ಸ್ಪಂದಿಸುತ್ತಾರೆ. ಹಿರಿಯ ಮಗನ ಬೇಕುಗಳು ಹಾಗೂ ಕಿರಿಯವನ ಬಯಕೆಗಳು ಒಂದೇ ಆಗಿರಲಾರವು. ಅವರ ಮನೋವಿಕಾಸವೂ ಭಿನ್ನವಾಗಿರುತ್ತವೆ. ಒಂದು ವೇಳೆ ಆ ಮೂರು ಮಕ್ಕಳಲ್ಲಿ ಒಬ್ಬ ಅಂಗವಿಕಲ ನಾಗಿದ್ದರೆ ಅವನು ಇತರ ಮಕ್ಕಳಿಗಿಂತ ಎಲ್ಲದರಲ್ಲಿಯೂ ಹಿಂದುಳಿಯುತ್ತಾನೆ. ಆದರೆ ತಂದೆ ತಾಯಿಯರು ಆ ಮಗು ವನ್ನು ಪ್ರೀತಿಯಿಂದ ಸಲಹುತ್ತಾರೆ, ವಂಚಿಸುವುದಿಲ್ಲ. ಆ ಕುಟುಂಬದಲ್ಲಿ ಕೊರತೆಯಿಲ್ಲದಿದ್ದರೆ ಆ ಅಂಗವಿಕಲ ಮಗುವಿಗೆ ಒಬ್ಬ ಆರೋಗ್ಯವಂತ ಬಡವನಿಗಿಂತ ಹೆಚ್ಚಿನ ಸೌಕರ್ಯಗಳೇ ದೊರೆಯುತ್ತಿರಬಹುದು!

ವ್ಯಕ್ತಿಗಳ ನಡುವೆ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ವ್ಯತ್ಯಾಸಗಳನ್ನು ನಿಶ್ಚಿತವಾಗಿ ಗುರುತಿಸಬಹುದು. ಅವರವರು ಬೆಳೆದುಬಂದ ವಾತಾವರಣ ಹಾಗೂ ಆನುವಂಶೀಯತೆಗೆ ಅನುಗುಣವಾಗಿ ದೈಹಿಕ ವ್ಯತ್ಯಾಸಗಳು ಇರುವುದು ಸಹಜ. ಶಿಕ್ಷಣ ಹಾಗೂ ಪರಿಸರದ ಪ್ರಭಾವದಿಂದಾಗಿ ಮಾನಸಿಕ ಬೆಳವಣಿಗೆಯಲ್ಲಿ ತರತಮಗಳನ್ನು ಕಾಣಬಹುದು. ಆದರೆ ಪ್ರತಿಯೊಂದು ಜೀವಿಯಲ್ಲೂ ಸುಪ್ತವಾಗಿರುವ ಆಧ್ಯಾತ್ಮಿಕ ಚೈತನ್ಯವು ಮೂಲತಃ ಒಂದೇ. ಅಗ್ನಿಯ ಕಿಡಿಗಳಂತೆ, ಸೂರ್ಯನ ಹಲವಾರು ಪ್ರತಿಬಿಂಬಗಳಂತೆ ಎಲ್ಲರಲ್ಲಿಯೂ ಒಂದೇ ಚೈತನ್ಯದ ಕಿಡಿ, ಅಂಶ ಇದೆ—ಇದು ವೇದಾಂತದ ನಿಲುವು. ಇಂತಹ ನಿಲುವಿನಿಂದ ಪ್ರೇರಿತವಾದ ಆಡಳಿತ ಹಾಗೂ ಸಾಮಾಜಿಕ ವ್ಯವಸ್ಥೆಯು ಮನುಷ್ಯನಲ್ಲಿ ಬಹಳ ಕಾಲದಿಂದ ನೆಲೆನಿಂತಿರುವ ಸ್ವಾರ್ಥಪರತೆ ಹಾಗೂ ವಿಶೇಷಾಧಿಕಾರ,

**ಎಂದು ನೂರಾರು ಜನ ಉದಾರ ಹೃದಯಿಗಳಾದ ನರನಾರಿಯರು ಪ್ರಪಂಚದ ಭೋಗಲಾಲಸೆಯನ್ನು ತೊರೆದು, ದಾರಿದ್ರ್ಯ ಮತ್ತು ಅಜ್ಞಾನದಲ್ಲಿ ಆಳದಾಳಕ್ಕೆ ಮುಳುಗುತ್ತಿರುವ ಮೂವತ್ತು ಕೋಟಿ ಭಾರತೀಯರ ಮೇಲ್ಮೆಗಾಗಿ ತಮ್ಮ ಶಕ್ತಿ ಮೀರಿ ದುಡಿಯುವರೋ ಅಂದು ನಮ್ಮ ದೇಶ ಉದ್ಧಾರವಾಗುವುದು. ನನ್ನ ಅಲ್ಪ ಜೀವನದಲ್ಲೇ ಸದುದ್ದೇಶ, ನಿಸ್ವಾರ್ಥತೆ ಮತ್ತು ಅಪರಿಮಿತ ಪ್ರೀತಿ ಪ್ರಪಂಚವನ್ನೇ ಗೆಲ್ಲಬಲ್ಲುದೆಂದು ಕಂಡಿರುವೆನು. ಲಕ್ಷಾಂತರ ಜನ ನೀಚರು ಮತ್ತು ಕಪಟಿಗಳು ಮಾಡುತ್ತಿರುವ ಅನಾಚಾರವನ್ನು ಇಂತಹ ಶೀಲಗಳಿಂದ ಸುಸಜ್ಜಿತನಾದ ಒಬ್ಬ ವ್ಯಕ್ತಿ ಮೆಟ್ಟಿಹಾಕಬಲ್ಲ.** —ಸ್ವಾಮಿ ವಿವೇಕಾನಂದ

ಏನಾಯಿತಿಗಳನ್ನು ಬಯಸುವ ಸಣ್ಣತನವನ್ನು ಹೋಗಲಾಡಿಸಬಹುದು. ಭಾರತ ದೇಶದ ಸಂಪತ್ತಿನ ಶೇ. ೮೦ರಷ್ಟು ಭಾಗವನ್ನು ಜನಸಂಖ್ಯೆಯ ಶೇ.೨೦ರಷ್ಟು ಸಂಖ್ಯೆಯಲ್ಲಿರುವ ಧನಿಕರೇ ಅನುಭವಿಸುತ್ತಿದ್ದಾರೆ. ಇಂತಹ ಅಸಮಾನತೆಯನ್ನು ಹೋಗಲಾಡಿಸಲು ಮೌಲ್ಯಗಳ ಶಿಕ್ಷಣ ಹಾಗೂ ಸಾಮಾಜಿಕ ಕಳಕಳಿಯನ್ನು ಜಾಗೃತಗೊಳಿಸುವ ಸಾಧನಗಳು ಬೇಕಾಗಿವೆ. ಇದಕ್ಕೆ ಪೂರಕವಾಗಿ ಆಡಳಿತ ವರ್ಗವೂ ಪಾರದರ್ಶಕತೆಯನ್ನು ರೂಢಿಸಿಕೊಳ್ಳಬೇಕು. ನೀತಿ ನಿಯಮಗಳನ್ನು ಉಲ್ಲಂಘಿಸುವವರಿಗೆ ತ್ವರಿತಗತಿಯಲ್ಲಿ ಶಿಕ್ಷೆ ವಿಧಿಸಿದರೆ, ಜನಸಾಮಾನ್ಯರಿಗೆ ನ್ಯಾಯಾಂಗ ಹಾಗೂ ಶಾಸಕಾಂಗದಲ್ಲಿ ಶ್ರದ್ಧೆ ಮೂಡುತ್ತದೆ.

ಕೇವಲ ರಾಜಕೀಯ ವಿಧಾನಗಳಿಂದ ನಮ್ಮ ದೇಶವನ್ನು ಕಾಡುತ್ತಿರುವ ಸಮಸ್ಯೆಗಳನ್ನು ಹೋಗಲಾಡಿಸುವುದು ಅಸಾಧ್ಯ. ಎಲ್ಲ ದೇಶಗಳಲ್ಲೂ ನಾನಾ ಬಗೆಯ ಪ್ರಯೋಗಗಳನ್ನು ಮಾಡಿ ಆಗಿದೆ. ಮಾನವನ ಹಿತವನ್ನು ಬಯಸುವ ಪ್ರೇಮಪೂರ್ಣ ಹಾಗೂ ನಿಃಸ್ವಾರ್ಥ ಹೃದಯವಿದ್ದರೆ ಮಾತ್ರ ಸಮಾನತೆಯನ್ನು ತರುವುದು ಸಾಧ್ಯ. ಪ್ರಜಾಪ್ರಭುತ್ವದ ತತ್ತ್ವಗಳೊಂದಿಗೆ ಈ ಗುಣಗಳನ್ನೂ ಸೇರಿಸಿದರೆ ಎಂತಹ ಶಕ್ತಿಯುತವಾದ ರಾಷ್ಟ್ರ ನಿರ್ಮಾಣವಾಗುವುದು! ವೇದಾಂತದ ಉನ್ನತ ವಿಚಾರಗಳನ್ನು ಕಾರ್ಯಗತಗೊಳಿಸುವ ಈ ಅವಕಾಶವನ್ನು ಬಿಡದೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಸಣ್ಣ ಸಣ್ಣ ಪ್ರಮಾಣದಲ್ಲೇ ಬದಲಾವಣೆಯನ್ನು ತರಲು ಪ್ರಯತ್ನಿಸೋಣ. "ಅಯ್ಯೋ, ಎಲ್ಲಾ ಕೆಟ್ಟು ಹೋಯಿತು" ಎಂದು ಗೊಣಗುವುದರಿಂದ ಏನೂ ಸಾಧಿತವಾಗುವುದಿಲ್ಲ. ಬದಲಿಗೆ ನನ್ನಿಂದ ಎಷ್ಟು ಸಾಧ್ಯವೋ ಅಷ್ಟನ್ನು ನಿಷ್ಠೆಯಿಂದ ಮಾಡುತ್ತೇನೆ ಎಂಬ ದೃಢ ಸಂಕಲ್ಪವಿದ್ದರೆ, ನಮ್ಮನ್ನು ಯಾರೂ ಎಂದಿಗೂ ತಡೆಹಿಡಿಯಲಾರರು. ಭಾರತದ ಭವ್ಯ ಭವಿತವ್ಯವನ್ನು ತಮ್ಮ ಒಳಗಣ್ಣಿನಿಂದ ಕಂಡು ನಮಗೆ ಸ್ಫೂರ್ತಿ ನೀಡಿದ ಸ್ವಾಮಿ ವಿವೇಕಾನಂದರ ಕನಸನ್ನು ನನಸಾಗಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ಅಭ್ಯುದಯದ ಪಥದಲ್ಲಿರುವ ನಮ್ಮ ದೇಶದ ಮುನ್ನಡೆಗೆ ಹೆಗಲೊಡ್ಡಿ ಧನ್ಯರಾಗೋಣ, ಪವಿತ್ರರಾಗೋಣ. 'ನಾವೆಲ್ಲ ಒಂದೇ' ಎಂಬ ಆಧ್ಯಾತ್ಮಿಕ ಸತ್ಯವನ್ನು ಸಾರುತ್ತ ಸಾಗರದ ಮಹಾ ಅಲೆಗಳಂತೆ ವಿಶ್ವವನ್ನೇ ಶಾಂತಿ, ಸೌಹಾರ್ದತೆಯ ಸಂದೇಶಗಳಿಂದ ತಬ್ಬಿಕೊಳ್ಳೋಣ. ಇದೇ ಭಾರತದ ನಿಲುವು, ಉದ್ದೇಶ. ಇದರಿಂದಲೇ ಈ ನಾಡು ಭವ್ಯ ಸಫಲತೆಯನ್ನು ಸಾಧಿಸಬಹುದು. ✪

ತಮ್ಮ ಜೀವನವನ್ನು ಹಂಚಿಕೊಂಡು ಇತರರ ಸೇವೆ ಮಾಡುವುದರಲ್ಲಿ ಮಹತ್ತರವಾದ ಆನಂದವಿದೆ. ಅಂಥ ಆನಂದ ಮನುಷ್ಯನ ಸ್ವಾರ್ಥವನ್ನು ಕಿತ್ತುಹಾಕಿ ಅವನನ್ನು ವಿಶಾಲಹೃದಯನನ್ನಾಗಿ ಮಾಡುತ್ತದೆ. ಶ್ರೀಮಾತೆ ಹಾಗೂ ನೇರ ಶಿಷ್ಯರ ವಿಚಾರದಲ್ಲಿ ಅನಾರೋಗ್ಯ ಇತ್ಯಾದಿ ಸಮಸ್ಯೆಗಳು ಯಾವಾಗ ಉದ್ಭವಿಸಿದರೂ, ನಿರಂಜನಾನಂದರು ಅವರ ಶುಶ್ರೂಷೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದರು. ಅಲಹಾಬಾದಿನಲ್ಲಿ ಯೋಗಾನಂದರಿಗೆ ಸಿಡುಬು ಆದಾಗ, ಅದ್ಭುತಾನಂದರಿಗೆ ನ್ಯುಮೋನಿಯಾ ತಗುಲಿದಾಗ, ಗೃಹೀಭಕ್ತರಾದ ಬಲರಾಮ ಹಾಗೂ ರಾಮ ಇಬ್ಬರ ಮರಣಕಾಲದಲ್ಲಿ, ಅವರುಗಳಿಗೆ ಇನ್ನಿಲ್ಲದ ಹಾಗೆ ಸೇವೆ ಮಾಡಿದವರು ನಿರಂಜನಾನಂದರು. ಪ್ರಸಿದ್ಧ ನಾಟಕಕರ ಗಿರೀಶನ ಮನಸ್ಸು ಖಿನ್ನತೆಗೆ ಒಳಗಾದಾಗ, ಅವನನ್ನು ಶ್ರೀಮಾತೆಯ ಬಳಿಗೆ ಕರೆದೊಯ್ದು ಖಿನ್ನತೆಯನ್ನು ಹೋಗಲಾಡಿಸಿದವರು ನಿರಂಜನಾನಂದರು. ೧೮೮೮ರಲ್ಲಿ ಶ್ರೀಮಾತೆಯವರು ಕಾಮಾರಪುಕುರದಲ್ಲಿ ಒಬ್ಬರೇ ವಾಸಿಸುತ್ತಿದ್ದಾಗ, ಹರೀಶನೆಂಬ ಶ್ರೀರಾಮಕೃಷ್ಣರ ಮನೋರೋಗಿಯಾದ ಶಿಷ್ಯನು ಅಲ್ಲಿಗೆ ಹೋಗಿ ಅವರ ಶಾಂತಿಗೆ ಭಂಗ ತರಲಾರಂಭಿಸಿದ. ಸಹಿಸಲಾರದೆ ಕೊನೆಗೆ ಶ್ರೀಮಾತೆಯವರು ಈ ಸಂಗತಿಯನ್ನು ವರಾಹನಗರದ ಮಠಕ್ಕೆ ತಿಳಿಸಬೇಕಾಯಿತು. ತಕ್ಷಣ ನಿರಂಜನಾನಂದರೂ ಶಾರದಾನಂದರೂ ಕಾಮಾರಪುಕುರಕ್ಕೆ ಓಡಿಬಂದರು. ನಿರಂಜನಾನಂದರು ಬಂದರೆಂದು ಕೇಳಿದ ಕೂಡಲೆ ಹರೀಶನಿಗೆ ಅದೆಷ್ಟು ಹೆದರಿಕೆಯಾಯಿತೆಂದರೆ, ಅವನು ವೃಂದಾವನಕ್ಕೆ ಓಡಿಹೋದ.



ಸ್ವಾಮಿ ನಿರಂಜನಾನಂದ